# All India Radio: Bangalore
# National Bulletins In Kannada
## 07.06.2025 / 19.35 hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**07.06.2025 / 19.35 hrs**

**<><*<><>*><>**

**ಮುಖ್ಯಾಂಶಗಳು**

**೧. ಸಿಡಿಆರ್‌ಐ -೨೦೨೫ ಸಮ್ಮೇಳನ; ಸಣ್ಣ ದ್ವೀಪ ರಾಷ್ಟ್ರಗಳಿಗೆ ಜಾಗತಿಕ ಸಹಕಾರಕ್ಕಾಗಿ ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ**

**೨. ಬ್ರಿಕ್ಸ್ ರಾಷ್ಟ್ರಗಳಿಂದ ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡನೆ; ಭಾರತದ ಶೂನ್ಯ ಸಹಿಷ್ಣುತೆ ನೀತಿಗೆ ಬೆಂಬಲ**

**೩. ಫ್ರಾನ್ಸ್‌ನಲ್ಲಿ ನಾಳೆಯಿಂದ ಅಂತಾರಾಷ್ಟ್ರೀಯ ಸಾಗರ ಸಮಾವೇಶ; ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ನೇತೃತ್ವದಲ್ಲಿ ಭಾರತದ ನಿಯೋಗ ಭಾಗಿ**

**೪. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನಾಳೆ ಬೆಂಗಳೂರಿಗೆ ಭೇಟಿ; 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'ದಲ್ಲಿ ರೈತರೊಂದಿಗೆ ಸಂವಾದ**

**೫. ತೈವಾನ್ ಓಪನ್ ಕ್ರೀಡಾಕೂಟ; ಮೊದಲ ದಿನ ಭಾರತಕ್ಕೆ ನಾಲ್ಕು ಚಿನ್ನದ ಪದಕ**

**<><*<><>*><>**

ಆಫ್ರಿಕನ್ ಒಕ್ಕೂಟವು ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯ ಸಮ್ಮೇಳನ ೨೦೨೫-ಸಿಡಿಆರ್‌ಐ ಗೆ ಸೇರ್ಪಡೆಗೊಂಡಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಹರ್ಷ ವ್ಯಕ್ತಪಡಿಸಿದ್ದಾರೆ. ಅಂತರರಾಷ್ಟ್ರೀಯ ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯ ಸಮ್ಮೇಳನದಲ್ಲಿ ತಮ್ಮ ವೀಡಿಯೊ ಸಂದೇಶದಲ್ಲಿ ಪ್ರಧಾನಿ, ಕಾರ್ಯಸಾಧ್ಯ ಯೋಜನೆಗಳ ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹಣಕಾಸಿನ ಪ್ರವೇಶವನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದರು. ಅಭಿವೃದ್ಧಿಶೀಲ ಸಣ್ಣ ದ್ವೀಪ ರಾಷ್ಟ್ರಗಳನ್ನು ಬೃಹತ್ ಸಾಗರ ರಾಷ್ಟ್ರಗಳಾಗಿ ಪರಿಗಣಿಸುವಂತೆ ತಿಳಿಸಿದ ಪ್ರಧಾನಿ, ವಿಪತ್ತುಗಳ ಕುರಿತು ಮುನ್ಸೂಚನೆ ನೀಡುವಂತಹ ವ್ಯವಸ್ಥೆಗಳನ್ನು ಬಲಪಡಿಸುವುದು ನಿರ್ಣಾಯಕವಾಗಿದೆ ಎಂದು ಪ್ರತಿಪಾದಿಸಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೮ ಸೆಕೆಂಡ್ಸ್)**

**<><*<><>*><>**

ಭಾರತವು ಯಾವಾಗಲೂ ಕಾನೂನಿನ ನಿಯಮ, ಜಾಗತಿಕ ಸಹಕಾರ ಮತ್ತು ವಿಶ್ವ ವೇದಿಕೆಯಲ್ಲಿ ಸಂವಾದದ ಅಗತ್ಯವನ್ನು ಬೆಂಬಲಿಸಿದೆ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಬ್ರೆಜಿಲ್‌ನ ಬ್ರೆಸಿಲಿಯಾದಲ್ಲಿಂದು ನಡೆದ ೧೧ನೇ ಬ್ರಿಕ್ಸ್ ಸಂಸದೀಯ ವೇದಿಕೆಯಲ್ಲಿ ಭಾರತೀಯ ನಿಯೋಗದ ನೇತೃತ್ವವನ್ನು ವಹಿಸಿದ್ದ ನಂತರ ವೀಡಿಯೊ ಸಂದೇಶವನ್ನು ಹಂಚಿಕೊಂಡ ಓಂ ಬಿರ್ಲಾ, ಬ್ರಿಕ್ಸ್ ರಾಷ್ಟ್ರಗಳ ನಡುವೆ ಸಂಸದೀಯ ಸಹಕಾರವನ್ನು ಬಲಪಡಿಸಲು, ಕೃತಕಬುದ್ಧಿಮತ್ತೆ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸಲು ಮತ್ತು ಆರ್ಥಿಕ ವಿಷಯಗಳಲ್ಲಿ ಸಾಮೂಹಿಕವಾಗಿ ಕಾರ್ಯ ನಿರ್ವಹಣೆಗೆ ಅರ್ಥಪೂರ್ಣ ಸಂವಾದ, ಅಭಿಪ್ರಾಯಗಳ ವಿನಿಮಯ ಮತ್ತು ಹಂಚಿಕೆಯ ಬದ್ಧತೆ ಇದೆ ಎಂದು ತಿಳಿಸಿದರು. ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಬ್ರಿಕ್ಸ್ ರಾಷ್ಟ್ರಗಳು ಖಂಡಿಸಿವೆ ಮತ್ತು ಜಂಟಿ ಪ್ರಯತ್ನಗಳ ಮೂಲಕ ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿವೆ ಎಂದು ಅವರು ಹೇಳಿದರು. ಭಾರತ, ಮುಂದಿನ ಬ್ರಿಕ್ಸ್ ಶೃಂಗಸಭೆಯನ್ನು ಆಯೋಜಿಸಲಿದೆ. ಆರ್ಥಿಕ, ಸಾಮಾಜಿಕ, ವ್ಯಾಪಾರ, ಕೃತಕಬುದ್ಧಿಮತ್ತೆ ಮತ್ತು ಇತರ ಪ್ರಮುಖ ವಿಷಯಗಳ ಕುರಿತು ಚರ್ಚೆಗಳಲ್ಲಿ ತೊಡಗಿಸಿಕೊಳ್ಳುತ್ತದೆ. ಭಾರತವು, ಈ ಕಾರ್ಯಕ್ರಮದ ಯಶಸ್ವಿ ಮತ್ತು ಉತ್ಪಾದಕ ಆತಿಥ್ಯವನ್ನು ಖಚಿತಪಡಿಸುತ್ತದೆ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ತಿಳಿಸಿದ್ದಾರೆ ಒತ್ತಿ ಹೇಳಿದರು.

**<><*<><>*><>**

ಭೂವಿಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಇಂದು ಫ್ರಾನ್ಸ್‌ಗೆ ತೆರಳಿದ್ದು, ಅಂತಾರಾಷ್ಟ್ರೀಯ ಸಾಗರ ಸಮಾವೇಶದಲ್ಲಿ ಭಾರತದ ಉನ್ನತ ಮಟ್ಟದ ನಿಯೋಗದ ನೇತೃತ್ವವಹಿಸುತ್ತಿದ್ದಾರೆ. ಅಕ್ಟೋಬರ್ ೧೩ರವರೆಗೆ ನಡೆಯಲಿರುವ ಈ ಸಂವಿಧಾನಾತ್ಮಕ ಸಮ್ಮೇಳನವು, ಫ್ರಾನ್ಸ್‌ನ ನೈಸ್ ಸಮುದ್ರತಟ ನಗರದಲ್ಲಿ ನಾಳೆಯಿಂದ ಆರಂಭವಾಗಲಿದೆ. ವಿಶ್ವಸಂಸ್ಥೆ

ಸಾಗರ ಸಮ್ಮೇಳನ- ಯುಎನ್‌ಒಸಿ ವೇದಿಕೆಯಲ್ಲಿ, ಜಾಗತಿಕ ಮಟ್ಟದ ನಾಯಕರು, ವಿಜ್ಞಾನಿಗಳು, ನೀತಿನಿರ್ಧಾರಕರು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳು ಸಮುದ್ರಗಳ ಶಾಶ್ವತ ಆಡಳಿತ ಮತ್ತು ಸಮುದ್ರಗಳ ಆರೋಗ್ಯಕ್ಕಾಗಿ ಕೈಗೊಳ್ಳಬಹುದಾದ ನಿಖರ ಕ್ರಮಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಮುಂದಿನ ನಾಲ್ಕು ದಿನಗಳಲ್ಲಿ ಸಚಿವರು, ಪ್ರಮುಖ ರಾಷ್ಟ್ರಗಳ ಸಚಿವರೊಂದಿಗೆ ದ್ವಿಪಕ್ಷೀಯ ಸಭೆಗಳಲ್ಲಿ ಭಾಗವಹಿಸುವುದರ ಜೊತೆಗೆ, ಯುಎನ್‌ಒಸಿ ವೇದಿಕೆಯಲ್ಲಿ ಭಾರತದ ರಾಷ್ಟ್ರೀಯ ಹೇಳಿಕೆಯನ್ನು ನೀಡಲಿದ್ದಾರೆ ಹಾಗೂ ಸಮುದ್ರ ಕಾರ್ಯಾಚರಣೆ ಕುರಿತು ಮಹತ್ವದ ನೀತಿ ಸಂವಾದಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

**<><*<><>*><>**

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳ ಒಂದು ವರದಿ ಇಲ್ಲಿದೆ.

**ವರದಿ:**

ಗಂಗೆಯ ಪುನರುಜ್ಜೀವನಕ್ಕಾಗಿ ರೂಪಿಸಲಾಗಿರುವ ನಮಾಮಿ ಗಂಗೆ ಯೋಜನೆ ಜಗತ್ತಿನ ಅತಿದೊಡ್ಡ ನದಿ ಪುನರುಜ್ಜೀವನ ಯೋಜನೆಯಾಗಿದೆ, ಈ ಯೋಜನೆಯಿಂದ ಗಂಗಾ ನದಿ ನೀರಿನ ಗುಣಮಟ್ಟ ಸುಧಾರಿಸಿದ್ದು, ಜೀವವೈವಿಧ್ಯತೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಇದರ ಜೊತೆಗೆ ಪರಿಸರ ಸಂರಕ್ಷಣೆಗೆ ಪೂರಕ ವಾಗಿರುವ ಸ್ವಚ್ಛ ಭಾರತ ಮಿಷನ್ ಮತ್ತು ಗೋಬರ್‌ಧನ್ ಯೋಜನೆ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ಕಸದ ನಿರ್ವಹಣೆಗೆ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. "ತಾಯಿಯ ಹೆಸರಿನಲ್ಲಿ ಒಂದು ಗಿಡ" ಅಭಿಯಾನದಡಿ ದೇಶಾದ್ಯಂತ ಈವರೆಗೆ ಸುಮಾರು ೧೪೨ ಕೋಟಿ ಗಿಡಗಳನ್ನು ನೆಡಲಾಗಿದ್ದು, ಇಂಗಾಲದ ಅತಿಹೊರಸೂಸುವಿಕೆಯನ್ನು ಹತೋಟಿಯಲ್ಲಿಡಲು ಸಹಕಾರಿಯಾಗಿದೆ. ಭಾರತ ಪ್ರಾಜೆಕ್ಟ್ ಚೀತಾ, ಪ್ರಾಜೆಕ್ಟ್ ಸಿಂಹ, ಮತ್ತು ಪ್ರಾಜೆಕ್ಟ್ ಟೈಗರ್ ಪ್ರಯತ್ನಗಳ ಮೂಲಕ ವನ್ಯಜೀವಿ ಸಂರಕ್ಷಣೆಯಲ್ಲೂ ಯಶಸ್ಸು ಸಾಧಿಸಿದ್ದು, ಪ್ರಸ್ತುತ ದೇಶದಲ್ಲಿ ೩ ಸಾವಿರದ ೬೮೨ ಹುಲಿಗಳಿವೆ, ಇದು ಪ್ರಪಂಚದ ಹುಲಿಗಳ ಸಂಖ್ಯೆಯ ಶೇಕಡ ೭೫ ರಷ್ಟಿದೆ. ಭಾರತ ಏಷ್ಯಾದಲ್ಲೇ ಅತಿಹೆಚ್ಚು ಸಂಖ್ಯೆಯ ಅಂದರೆ, ೯೧ ರಾಂಸರ್ ಸೈಟ್‌ಗಳನ್ನು ಹೊಂದಿದೆ. ಇದು ದೇಶದ ಜೌಗು ಪ್ರದೇಶಗಳನ್ನು ಸಂಕ್ಷಿಸುವ ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ. ಇದರ ಜೊತೆಗೆ ಭಾರತದ ೧೩ ಕಡಲತೀರಗಳು ಬ್ಲೂ ಫ್ಲ್ಯಾಗ್ ಪ್ರಮಾಣಪತ್ರ ಪಡೆದಿವೆ. ಇನ್ನು ಹವಾಮಾನ ಸದೃಢತೆಗೆ ಪೂರಕವಾಗಿ, ಅಮೃತ ಧರೋಹರ್ ಮತ್ತು ಮಿಶ್ಟಿ ಯೋಜನೆಗಳು, ಜೌಗು ಪ್ರದೇಶಗಳು ಮತ್ತು ಮ್ಯಾಂಗ್ರೋವ್ ಅರಣ್ಯ ಪ್ರದೇಶದ ಸಂರಕ್ಷಣೆಗೆ ಸಹಕರಿಸಿದೆ ಭಾರತದ ಹಸಿರು ಪರಿವರ್ತನೆ ಕೇವಲ ಒಂದು ನೀತಿಯಲ್ಲ ಬದಲಿಗೆ ಒಂದು ಜನಾಂದೋಲನ, ಒಂದು ಜವಾಬ್ದಾರಿ ಹಾಗೂ ಭವಿಷ್ಯ ಪೀಳಿಗೆಗಳಿಗೆ ನೀಡಿವ ಭರವಸೆಯಾಗಿದೆ.

**<><*<><>*><>**

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಬೆಂಗಳೂರಿಗೆ ನಾಳೆ ಆಗಮಿಸಲಿದ್ದಾರೆ. ಬೆಂಗಳೂರಿನ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಸಹಯೋಗದಲ್ಲಿ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಆಯೋಜಿಸಿರುವ 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ' ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸಲಿದ್ದಾರೆ. ಈ ವೇಳೇ ಅವರು, ಸುಮಾರು ೫೦೦ಕ್ಕೂ ಹೆಚ್ಚು ರೈತರನ್ನುದ್ದೇಶಿಸಿ ಮಾತನಾಡಲಿದ್ದು, ಕರ್ನಾಟಕಕ್ಕೆ ಸಂಬಂಧಿಸದಂತೆ ವಿವಿಧ ಸಮಸ್ಯೆಗಳ ಕುರಿತು ಅವರೊಂದಿಗೆ ಸಂವಾದ ನಡೆಸಲಿದ್ದಾರೆ. ತಮ್ಮ ಪ್ರವಾಸದ ಭಾಗವಾಗಿ ರೈತರ ಕ್ಷೇತ್ರಗಳಿಗೆ ಭೇಟಿ ನೀಡಲಿದ್ದಾರೆ. ಇದರ ಜೊತೆಗೆ ಐಸಿಎಆರ್ ಸಂಸ್ಥೆಗಳ ತಂತ್ರಜ್ಞಾನ ಪ್ರದರ್ಶನವನ್ನು ವೀಕ್ಷಿಸಲಿದ್ದಾರೆ. ಆಧುನಿಕ ತಂತ್ರಜ್ಞಾನ ಮತ್ತು ಕೃಷಿಯಲ್ಲಿ ಸುಧಾರಿತ ಬಿತ್ತನೆ ಬೀಜ ಬಳಕೆ ಬಗ್ಗೆ ರೈತ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಮೇ ೨೯ ರಿಂದ ಜೂನ್ ೧೨ರವರೆಗೆ ಅಭಿಯಾನ ಮುಂದುವರೆಯಲಿದೆ.

**<><*<><>*><>**

ಭಾರತ ಮತ್ತು ಬ್ರಿಟನ್ ನಡುವೆ ಇತ್ತೀಚೆಗೆ ಮುಕ್ತಾಯಗೊಂಡ ಮುಕ್ತ ವ್ಯಾಪಾರ ಒಪ್ಪಂದ ಮತ್ತು ಡಬಲ್ ಕಾಂಟ್ರಿಬ್ಯೂಷನ್ ಕನ್ವೆನ್ಷನ್ ಅನ್ನು ಮೈಲಿಗಲ್ಲು ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಬಣ್ಣಿಸಿದ್ದಾರೆ. ನವದೆಹಲಿಯಲ್ಲಿ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಅವರೊಂದಿಗಿನ ಭೇಟಿಯ ಸಂದರ್ಭ ಮಾತನಾಡಿದ ಸಚಿವರು, ಈ ಒಪ್ಪಂದವು ವ್ಯಾಪಾರ ಮತ್ತು ಹೂಡಿಕೆಯನ್ನು ಬೆಂಬಲಿಸುವುದಲ್ಲದೆ, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳ ಇತರ ಕಾರ್ಯತಂತ್ರದ ಮೇಲೂ ಸಕಾರಾತ್ಮಕ ಪರಿಣಾಮ ಬೀರುತ್ತದೆ

ಎಂದು ಹೇಳಿದರು. ಇದೇ ವೇಳೆ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡಿಸಿದ್ದಕ್ಕಾಗಿ ಮತ್ತು ಭಾರತಕ್ಕೆ ಬೆಂಬಲ ನೀಡಿದ್ದಕ್ಕಾಗಿ ಬ್ರಿಟನ್ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದರು.

**ಧ್ವನಿ: ಡಾ. ಎಸ್.ಜೈಶಂಕರ್ ( ೨೧ ಸೆಕೆಂಡ್ಸ್)**

**<><*<><>*><>**

ದೇಶಾದ್ಯಂತ ಇಂದು ಬಕ್ರೀದ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು. ಬಕ್ರಿದ್ ಹಬ್ಬದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ. ಈ ಹಬ್ಬ ತ್ಯಾಗ, ನಂಬಿಕೆ ಮತ್ತು ಮಾನವೀಯ ಮೌಲ್ಯಗಳ ಸಂಕೇತವೆಂದು ರಾಷ್ಟ್ರಪತಿಯವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ನಿಸ್ವಾರ್ಥತೆ ಮತ್ತು ಸಮರ್ಪಣೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕಾಗಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮನವಿ ಮಾಡಿದ್ದಾರೆ.

**<><*<><>*><>**

ಭಯೋತ್ಪಾದನೆಯ ವಿರುದ್ಧ ಜಾಗತಿಕ ಮಟ್ಟದಲ್ಲಿ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ನೇತೃತ್ವದ ಸರ್ವಪಕ್ಷ ನಿಯೋಗ, ಜರ್ಮನಿಯ ರಾಜಧಾನಿ ಬರ್ಲಿನ್‌ನಲ್ಲಿ ಜರ್ಮನ್ ಸರ್ಕಾರ, ಸಂಸತ್ತು ಮತ್ತು ಪ್ರಮುಖ ಚಿಂತನ ಕೇಂದ್ರಗಳ ಹಿರಿಯ ಪ್ರತಿನಿಧಿಗಳನ್ನು ಭೇಟಿಯಾಗಿ, "ಉಗ್ರವಾದದ ವಿರುದ್ಧ ಶೂನ್ಯ ಸಹಿಷ್ಣುತೆ" ಎಂಬ ಭಾರತದ ತತ್ವಾತ್ಮಕ ನಿಲುವು ಮತ್ತು ಗಡಿ ದಾಟಿ ನಡೆಯುವ ಉಗ್ರ ದಾಳಿಗಳ ವಿರುದ್ಧದ ತಂತ್ರವನ್ನು ಹಂಚಿಕೊಂಡಿತು. ನಿಯೋಗವು, ಜರ್ಮನ್ ಸಂಸತ್ತಿನಲ್ಲಿ ವಿದೇಶಾಂಗ ನೀತಿ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ತೊಡಗಿರುವ ಹಿರಿಯ ಸದಸ್ಯರು, ಹಾಗೂ ಜರ್ಮನಿಯ ಪ್ರಮುಖ ಚಿಂತನ ಸಂಸ್ಥೆ "ಕೊನ್ರಾಡ್ ಆಡೆನಾವರ್ ಸ್ಟಿಫ್ಟಂಗ್" ನೊಂದಿಗೆ ಚರ್ಚೆ ನಡೆಸಿತು. ಜರ್ಮನಿಯ ಭಾರತ ರಾಯಭಾರಿ ಅಜೀತ್ ಗುಪ್ತೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ, ಪ್ರಮುಖ ಜರ್ಮನ್ ಚಿಂತನ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಗಣ್ಯರೊಂದಿಗೆ ಸಂವಾದ ನಡೆಸಲಾಯಿತು. ಈ ಸಂವಾದಗಳ ವೇಳೆ, ಉಗ್ರವಾದಕ್ಕೆ ನೆಪವಾಗಿ ಅಣ್ವಸ್ತ್ರ ಬೆದರಿಕೆ ಬಳಸುವ ಪ್ರಯತ್ನವನ್ನು ಅವಕಾಶ ನೀಡಬಾರದು ಎಂಬುದನ್ನು ಪ್ರತಿನಿಧಿಗಳು ಗಂಭೀರವಾಗಿ ಪ್ರತಿಪಾದಿಸಿದರು. ಗಡಿ ದಾಟುವ ಭಯೋತ್ಪಾದಕರ ವಿರುದ್ಧ ಭಾರತ ಹೊಂದಿರುವ ಮುಂದಿನ ಕಾರ್ಯತಂತ್ರದ ಕುರಿತು ಚರ್ಚೆ ನಡೆಯಿತು.

**<><*<><>*><>**

ತೈವಾನ್ ಓಪನ್ ಕ್ರೀಡಾಕೂಟದ ಮೊದಲ ದಿನವೇ ಭಾರತೀಯ ಕ್ರೀಡಾಪಟುಗಳು ಅಭೂತಪೂರ್ವ ಪ್ರದರ್ಶನ ನೀಡಿ ನಾಲ್ಕು ಚಿನ್ನದ ಪದಕಗಳನ್ನು ಗೆದ್ದು ಶುಭಾರಂಭ ಮಾಡಿದ್ದಾರೆ. ಮಹಿಳೆಯರ ೧ ಸಾವಿರದ ೫೦೦ ಮೀಟರ್ ಓಟದಲ್ಲಿ ಪೂಜಾ, ೪ ನಿಮಿಷ ೧೧ ಸೆಕೆಂಡ್‌ನಲ್ಲಿ ಗುರಿ ತಲುಪಿ, ಭಾರತಕ್ಕೆ ಮೊದಲ ಚಿನ್ನದ ಕೊಡುಗೆ ನೀಡಿದರು.

ಪುರುಷರ ಟ್ರಿಪಲ್ ಜಂಪ್‌ನಲ್ಲಿ ಮೂರನೇ ಪ್ರಯತ್ನದಲ್ಲಿ ೧೬.೨೧ ಮೀಟರ್ ಜಿಗಿಯುವ ಮೂಲಕ ಅಬ್ದುಲ್ಲ ಅಬೂಬಕ್ಕರ್ ಎರಡನೇ ಚಿನ್ನದ ಪದಕ ಗೆದ್ದರು. ಹರ್ಡಲ್ಸ್ ಓಟ ವಿಭಾಗದಲ್ಲಿ, ಜ್ಯೋತಿ ಯಾರ್ರಾಜಿ ಮಹಿಳೆಯರ ೧೦೦ ಮೀಟರ್ ಓಟದಲ್ಲಿ ೧೨.೯೯ ಸೆಕೆಂಡ್‌ಗಳಲ್ಲಿ ಗುರಿ ತಲುಪುವ ಮೂಲಕ ಚಿನ್ನ ಗೆದ್ದರು. ಮತ್ತು ಪುರುಷರ ೧೧೦ ಮೀಟರ್ ಹರ್ಡಲ್ಸ್‌ನಲ್ಲಿ ತೇಜಸ್ ಶಿರ್ಸೆ ಶ್ರೇಷ್ಠ ಪ್ರದರ್ಶನವನ್ನು ನೀಡಿ ೧೩.೫೨ ಸೆಕೆಂಡು ಸಮಯದೊಂದಿಗೆ ಗುರಿ ತಲುಪುವ ಮತ್ತೊಂದು ಚಿನ್ನದ ಪದಕವನ್ನು ಜಯಿಸಿದ್ದಾರೆ.

**<><*<> ಇಲ್ಲಿಗೆ ವಾರ್ತಾಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**